KAKB220049982023

| | |
|---|---|
| Presented on | : 11-08-2023 |
| Registered on | : 11-08-2023 |
| Decided on | : 04-09-2023 |
| Duration | : 0 years, 0 months, 24 days |

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಃಉಪಸ್ಥಿತರುಃ

ಕುಮಾರಿ. ಸ್ನೇಹಾ. ಪಾಟೀಲ್.
ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಆಳಂದ.

ದಿನಾಂಕಃ 4ನೇ ಸೆಪ್ಟೆಂಬರ-2023

ಅಪರಾಧಿಕ ಸಂಕೀರ್ಣ ಪ್ರಕರಣ ಸಂಖ್ಯೆಃ**1078ಃ2023**

ಅರ್ಜಿದಾರರು

ವೈಷ್ಣವಿ ತಂದೆ ಜಟ್ಟೆಪ್ಪ ಮದನ,
ವಯಃ 09 ವರ್ಷ ಅಲ್ಪವಯಸ್ಕರು, ಇವರ
ತಾಯಿಯಾದ ಅರ್ಚನಾ ಗಂಡ ಜಟ್ಟೆಪ್ಪ ಮದನ,
ವಯಃ 28 ವರ್ಷ, ಉಃ ಕೂಲಿ ಕೆಲಸ,
ಸಾಃ ಚಿಂಚನಸೂರ ತಾಃ ಆಳಂದ ಜಿಃ ಕಲಬುರ್ಗಿ.

(ಪ್ರತಿನಿಧಿಸುವವರು ಶ್ರೀ ಎನ.ಎಂ.ಆರ್. ವಕೀಲರು)

ಎದುರುದಾರರು

1. ಜನನ ಹಾಗೂ ಮರಣ ನೊಂದಣಾಧಿಕಾರಿಗಳು,
   ತಹಶೀಲ್ದಾರ, ಆಳಂದ ರವರ ಮುಖಾಂತರ.

(ಎದುರುದಾರ ನಂ.1 ರವರು ಗೈರು ಹಾಜರ ಇರುತ್ತಾರೆ)

**ಃ ಆ ದೇ ಶ ಃ**

ಈ ಪ್ರಕರಣದ ಅರ್ಜಿದಾರರು ಎದುರುದಾರ ನಂ.1 ಇವರ ವಿರುದ್ದ ಜನನ ಮತ್ತು ಮರಣ ನೊಂದಣಿ ಕಾಯ್ದೆ 1969ರ ಕಲಂ 13(3)ನೇದ್ದರಲ್ಲಿ ಜನನಃಮರಣ ನೊಂದಣಿ ದಾಖಲು ಮಾಡಲು ನಿರ್ದೇಶನ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರ ಅರ್ಜಿಯ ಸಂಕ್ಷೀಪ್ತ ವಿವರಣೆ.

2. ಅರ್ಜಿದಾರರ ಇವರು ದಿನಾಂಕಃ 24.08.2017 ರಂದು ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಚಿಂಚನಸೂರ ಗ್ರಾಮದ ಮನೆಯಲ್ಲಿ ಜನಿಸಿರುತ್ತಾರೆ ಮತ್ತು ಅರ್ಜಿದಾರರ ಪಾಲಕರಿಗೆ ಸರಿಯಾದ ಮಾಹಿತಿ ಇರದ ಕಾರಣ ಮತ್ತು ಕಾರಣಾಂತರಗಳಿಂದ ಸದರಿಯವರ ಜನನವನ್ನು ಎದುರುದಾರ ನಂ.1 ಇವರ ಕಛೇರಿಯಲ್ಲಿ ನೊಂದಣಿ ಮಾಡಲು ಆಗಿರುವುದಿಲ್ಲ. ಆದರೂ ಸಹಿತ ಎದುರುದಾರ ನಂ.1 ತಮ್ಮ ಇಲಾಖಾ ವತಿಯಿಂದ ಸದರಿ ನೊಂದಣಿಯನ್ನು ಮಾಡಿರಬಹುದು ಎಂಬ ವಿಶ್ವಾಸದಲ್ಲಿ ಇರುತ್ತಾರೆ. ಹೀಗಿರುವಾಗ ಅರ್ಜಿದಾರರು ಎದುರುದಾರ ನಂ.1 ಇವರ ಕಛೇರಿಗೆ ಹೋಗಿ ತನ್ನ ಜನನ ನೊಂದಣಿ ಪ್ರಮಾಣ ಪತ್ರವನ್ನು ವಿಚಾರಿಸಿದಾಗ ಎದುರುದಾರ ನಂ.1 ಇವರ ಕಛೇರಿಯವರು ಸದರಿ ನೊಂದಾವಣಿ ಆಗಿಲ್ಲವೆಂದು ಮತ್ತು ಈ ರೀತಿಯಾಗಿ ತಮಗೆ ಪ್ರಮಾಣ ಪತ್ರ ನೀಡಲು ಬರುವುದಿಲ್ಲವೆಂದು ಹಿಂಬರವನ್ನು ಕೊಟ್ಟಿರುತ್ತಾರೆ. ಮುಂದುವರೆದು ಅರ್ಜಿದಾರರು ಹೇಳುವುದೇನೆಂದರೆ ಸದರಿ ಪ್ರಮಾಣ ಪತ್ರವು ಶಾಲಾ ದಾಖಲಾತಿಗಾಗಿ, ಸರ್ಕಾರಿ ಸೌಲಭ್ಯಕ್ಕಾಗಿ ಮತ್ತು ಇನ್ನಿತರ ಕಾರ್ಯಗಳಿಗಾಗಿ ಬೇಕಾಗಿರುವುದರಿಂದ

ಸೂಕ್ತ ಆದೇಶ ಹೊರಡಿಸಬೇಕು ಹಾಗೂ ಅವರು ಸಲ್ಲಿಸಿದ ಅರ್ಜಿಯನ್ನು ಮಂಜೂರುಗೊಳಿಸಬೇಕು ಎಂದು ಇತ್ಯಾದಿಯಾಗಿ ಕೇಳಿಕೊಂಡಿದ್ದಾರೆ.

3. ಅರ್ಜಿಯನ್ನು ದಾಖಲಿಸಿದ ನಂತರ ಎದುರುದಾರಿಗೆ ನೋಟಿಸ್ಸುಗಳನ್ನು ಕಳುಹಿಸಲಾಗಿತ್ತು. ಸದರಿ ನೋಟಿಸ್ಸುಗಳು ಜಾರಿಯಾಗಿರುತ್ತವೆ. ಇದಾಗಿಯೂ ಎದುರುದಾರ ನಂ.1 ಇವರು ಗೈರು ಹಾಜರಾಗಿರುತ್ತಾರೆ. ಅದೇ ರೀತಿ ಉಳಿದ ಎದುರುದಾರರು ಯಾವುದೇ ತಕರಾರು ವಗೈರು ಸಲ್ಲಿಸಿರುವುದಿಲ್ಲ.

4. ತದನಂತರ ಅರ್ಜಿದಾರರು ತಮ್ಮ ಅರ್ಜಿಯ ಸಂಬಂಧವಾಗಿ ತಾವು ಸ್ವತಃ ಸಾಕ್ಷಿ ನಂ.1 ಆಗಿ ಸಾಕ್ಷ್ಯ ನೀಡಿ ಆ ಮೇರೆಗೆ ನಿ.ಪಿ-1 ಮತ್ತು ನಿ.ಪಿ-2 ರ ವರೆಗೆ ದಾಖಲೆಗಳನ್ನು ಹಾಜರುಪಡಿಸಿದ್ದಾರೆ. ಹಾಗೂ ತಮ್ಮ ಪರವಾಗಿ ಸಾಕ್ಷ್ಯ ಮುಗಿದಿರುವುದಾಗಿ ಹೇಳಿಕೊಂಡಿದ್ದಾರೆ.

5. ಅರ್ಜಿದಾರರ ವಾದವನ್ನು ಆಲಿಸಲಾಯಿತು ಮತ್ತು ಲಭ್ಯವಿದ್ದ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

6. ಈ ಕೆಳಗಿನ ಅಂಶಗಳು ನ್ಯಾಯಾಲಯದ ಅವಗಾಹನೆಗಾಗಿ ಬಂದಿರುತ್ತವೆ.

   1. ಅರ್ಜಿದಾರರು ತಮ್ಮ ಅರ್ಜಿಯನ್ನು ಪುರಸ್ಕರಿಸಲು ಸೂಕ್ತ ಕಾರಣಗಳನ್ನು ಸಲ್ಲಿಸಿರುವರೇ?

   2. ಏನು ಆದೇಶ?

7. ಈ ಮೇಲಿನ ಅಂಶಗಳಿಗೆ ನನ್ನ ಅಭಿಪ್ರಾಯ ಈ ಕೆಳಗಿನಂತೆ ಇರುತ್ತವೆ.

   1. ಸಕಾರಾತ್ಮಕವಾಗಿ.

   2. ಕೊನೆಯ ಆದೇಶದ ಪ್ರಕಾರ.

ಸದರಿ ನನ್ನ ಉತ್ತರಗಳು ಈ ಕೆಳಗಿನ ಕಾರಣಗಳಿಂದ ಕೂಡಿರುತ್ತವೆ.

## ಃ ಕಾ ರ ಣ ಗ ಳು ಃ

8. **ಅಂಶ ನಂ.1ಃ** ಈ ಕೇಸಿನ ಅರ್ಜಿದಾರರು ತಾವು ಸ್ವತಃ ಸಾಕ್ಷಿ ನುಡಿದು ತಮ್ಮ ಸಾಕ್ಷ್ಯದಲ್ಲಿ ತಾವು ಅರ್ಜಿಯಲ್ಲಿ ಹೇಳಲಾದ ವಿಷಯಗಳನ್ನು ಮತ್ತೊಮ್ಮೆ ಪುನರಾವರ್ತಿಸಿರುತ್ತಾರೆ. ಆದ್ದರಿಂದ ಸದರಿ ವಿಷಯಗಳನ್ನು ಮತ್ತೊಮ್ಮೆ ಇಲ್ಲಿ ಚರ್ಚಿಸುವುದು ಅವಶ್ಯಕವಿರುವುದಿಲ್ಲ. ತಮ್ಮ ಮೌಖಿಕ ಸಾಕ್ಷಿಯ ಜೊತೆ ಅರ್ಜಿದಾರರು ದಾಖಲೆಗಳು ನಿಪಿ-1 ಮತ್ತು 2 ಎಂದು ಗುರುತಿಸಿಕೊಂಡಿರುತ್ತಾರೆ. ನಿಪಿ-1 ಅಲಭ್ಯ ಪ್ರಮಾಣ ಪತ್ರ, ನಿಪಿ-2 ಆಧಾರ ಗುರುತಿನ ಚೀಟಿಯ ಧೃಡಿಕೃತ ಪ್ರತಿ ಆಗಿರುತ್ತವೆ.

9. ನಾನು ಲಭ್ಯವಿದ್ದ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಶವಾಗಿ ಪರಿಶೀಲಿಸಿರುತ್ತೇನೆ ಮತ್ತು ಇದರಿಂದ ತಿಳಿದುಬರುವುದೇನೆಂದರೆ ಅರ್ಜಿದಾರರು ದಿನಾಂಕಃ 24.08.2017 ರಂದು ಜನಿಸಿದ್ದು, ಸದರಿಯವರ ಜನನವು ಎದುರುದಾರರ ವಹಿಯಲ್ಲಿ ನೊಂದಾವಣೆಯಾಗಿರುವುದಿಲ್ಲ.

10. ಈ ಪ್ರಕರಣದಲ್ಲಿ ನೋಟಿಸ್ಸು ಜಾರಿಯಾದರೂ ಸಹಿತ ಎದುರುದಾರರಾಗಲಿ ಅಥವಾ ಬೇರೆಯಾರಾಗಲಿ ತಕರಾರು ವಗೈರೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ ವಿಷಯಗಳು ಮತ್ತು ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ ವಿಷಯಗಳು ಹಾಗೇಯೇ ಉಳಿದಿದ್ದು, ಸದರಿ ವಿಷಯಗಳಲ್ಲಿಯ ಯಾವುದೇ ರೀತಿಯ ತಕರಾರುಗಳು ಇಲ್ಲದೇ ಇರುವುದರಿಂದ ಅರ್ಜಿದಾರರ ವಾದವನ್ನು ಅಲ್ಲಗಳೆಯಲು ಯಾವುದೇ ಸಾಕ್ಷ್ಯಾದಾರ ಇರುವುದಿಲ್ಲ. ಅಷ್ಟೇ ಅಲ್ಲದೇ ಅರ್ಜಿದಾರರು ಈ ಪ್ರಕರಣಕ್ಕೆ ಬೇಕಾಗುವಷ್ಟು ಸಾಕ್ಷ್ಯವನ್ನು ಒದಗಿಸಿರುವುದರಿಂದ ಅಂಶ ನಂ.1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

11. **<u>ಅಂಶ ನಂ.2:</u>** ಅಂಶ ನಂ.1ರಲ್ಲಿ ಚರ್ಚಿಸಲಾದ ವಿಷಯಗಳ ಆಧಾರ ಮೇಲಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

**: <u>ಆ ದೇ ಶ</u> :**

ಅರ್ಜಿದಾರರು ಜನನ ಮತ್ತು ಮರಣಗಳ ನೊಂದಣಿ ಅಧಿನಿಯಮ 1969ರ ಕಲಂ 13(3)ನೇದ್ದರಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಎದುರುದಾರ ನಂ.1 ಇವರಿಗೆ ಅರ್ಜಿದಾರ ವೈಷ್ಣವಿ ತಂದೆ ಜಟ್ಟೆಪ್ಪ ಮದನ ಇವರು ದಿನಾಂಕ 24.08.2017 ರಂದು ಚಿಂಚನಸೂರ ಗ್ರಾಮದ ಮನೆಯಲ್ಲಿ ಜನನ ಹೊಂದಿರುತ್ತಾರೆಂದು, ಜನನ ನೊಂದಣಿ ವಹಿಯಲ್ಲಿ ನೊಂದಾವಣೆ ಮಾಡಿ ಸೂಕ್ತ ಶುಲ್ಕ ಇತ್ಯಾದಿಗಳನ್ನು ಪಡೆದುಕೊಂಡು ಆ ನಂತರ ಪ್ರಮಾಣ ಪತ್ರ ನೀಡಲು ಆದೇಶಿಸಲಾಗಿದೆ.

(ಆದೇಶವನ್ನು ಬೆರಳಚ್ಚುಗಾರರಿಗೆ ನೇರವಾಗಿ ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿ ಗಣಕ ಯಂತ್ರದಲ್ಲಿ ದಿನಾಂಕ 04ನೇ ಸೆಪ್ಟೆಂಬರ-2023 ರಂದು ಬೆರಳಚ್ಚು ಮಾಡಿಸಲಾಯಿತು)

**ಸ್ನೇಹಾ. ಪಾಟೀಲ್.**
**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ.ಆಳಂದ.**

## ಃ ಅನುಬಂಧ ಃ

1. ಅರ್ಜಿದಾರರ ಪರ ಸಾಕ್ಷಿಗಳ ಪಟ್ಟಿ.

ಸಾಕ್ಷಿ ನಂ.1 ಅರ್ಚನಾ ಗಂಡ ಜಟ್ಟೆಪ್ಪ ಮದನ,
ಸಾಃ ಚಿಂಚನಸೂರ, ತಾಃ ಆಳಂದ, ಜಿಃ ಕಲಬುರಗಿ

2. ಅರ್ಜಿದಾರರ ಪರ ದಾಖಲೆಗಳ ಪಟ್ಟಿ.

| | | |
|---|---|---|
| ನಿಪಿ-1 | ಃ | ಅಲಭ್ಯ ಪ್ರಮಾಣ ಪತ್ರ. |
| ನಿಪಿ-2 | ಃ | ಆಧಾರ ಕಾರ್ಡ ಗುರುತಿನ ಚೀಟಿ |

3. ಎದುರುದಾರರ ಪರ ಸಾಕ್ಷಿಗಳ ಪಟ್ಟಿ.

- ಏನೂ ಇರುವುದಿಲ್ಲ.

4. ಎದುರುದಾರರ ಪರ ದಾಖಲೆಗಳ ಪಟ್ಟಿ.

- ಏನೂ ಇರುವುದಿಲ್ಲ.

**ಸ್ನೇಹಾ. ಪಾಟೀಲ್.**
**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ.ಆಳಂದ.**